# ಏನಿದು ಕೆಮಿಕಲ್ ಪೀಲ್.?



ಉಮಾ ಜಯಕುಮಾರ್
ಬ್ಯೂಟಿಶಿಯನ್

**ಮುಖದ ಚರ್ಮಕ್ಕೆ ಹೊಳಪು ನೀಡಲು, ಕಲೆ ನಿವಾರಿಸಲು, ಗುಳಿ ಬಿದ್ದುದನ್ನು ಹೋಗಲಾಡಿಸಿ ನುಣುಪುಗೊಳಿಸಲು ಕೆಲವೊಂದು ಚಿಕಿತ್ಸೆಯಿಂದ ಸಾಧ್ಯ. ಇಂಥ ಚಿಕಿತ್ಸೆ ಯಾವುದು? ಹೇಗೆ ಮಾಡುವುದು?**

ಸೌಂದರ್ಯದ ಪರಿಭಾಷೆಯಲ್ಲಿ ಮುಖದ ಸೌಂದರ್ಯಕ್ಕೆ ಪ್ರಧಾನ ಸ್ಥಾನ. ಮುಖದ ಮೇಲಿನ ತ್ವಚೆ ನುಣುಪಾಗಿಯೂ, ಹೊಳಪಿನಿಂದ ಕೂಡಿದ್ದರೆ, ಸುಕ್ಕು, ಗುಳಿ, ಕಲೆಗಳಿಲ್ಲದೆ ನಯವಾಗಿದ್ದರೆ ಅದರ ಅಂದ ದುಪ್ಪಟ್ಟು. ಇಂಥ ಚರ್ಮ ಪಡೆಯಲು ಕೆಲವು ಚಿಕಿತ್ಸೆಗಳೂ ಈಗ ಲಭ್ಯವಿದೆ. ಅದು ಯಾವುದು..?



### ಕೆಮಿಕಲ್ ಪೀಲ್

ಈ ಚಿಕಿತ್ಸೆಯನ್ನು ಮಾಡುವಾಗ ಚರ್ಮ.. ಎಣ್ಣೆ ಚರ್ಮವೋ, ಒಣ ಚರ್ಮವೋ, ಮಧ್ಯಮ ಚರ್ಮವೋ ಎಂದು ಪರೀಕ್ಷಿಸಿಕೊಳ್ಳಬೇಕು.

ಗುಳ್ಳೆಗಳು, ಕಪ್ಪುಕಲೆ, ಚರ್ಮದ ಸುಕ್ಕು... ಈ ಆಧಾರದ ಮೇಲೆ ಯಾವ ರೀತಿಯ ಕೆಮಿಕಲ್ ಪೀಲ್ ಬೇಕು ಎಂದು ನಿರ್ಧರಿಸಿ ಆ ಆಧಾರದ ಮೇಲೆ ಚಿಕಿತ್ಸೆ ಕೊಡಲಾಗುತ್ತದೆ. ತಕ್ಷಣ ಫಲಿತಾಂಶ ದೊರೆಯುತ್ತದೆ. ಈ ಚಿಕಿತ್ಸೆಯನ್ನು ಹದಿನೈದು ದಿನಕ್ಕೊಮ್ಮೆ 6 ರಿಂದ 8 ಸಲ ಮಾಡಿಸಿಕೊಳ್ಳ ಬೇಕಾಗುತ್ತದೆ.

ಈ ಕೆಮಿಕಲ್ ಪೀಲ್‌ನಲ್ಲಿ ನಾಲ್ಕು ರೀತಿಗಳಿವೆ.

#### ಗ್ಲೈಕೊಲಿಕ್ ಆಸಿಡ್ ಪೀಲ್:

ಈ ಚಿಕಿತ್ಸೆಯಿಂದ ಚರ್ಮದ ಸುಕ್ಕು ಕಡಿಮೆಯಾಗುತ್ತದೆ. ಚರ್ಮದ ಕಾಂತಿ ಹೆಚ್ಚಿಸುತ್ತದೆ. ಗುಳ್ಳೆಗಳು ಕೂಡ ಮಾಯವಾಗುತ್ತದೆ. ಚರ್ಮದ ಮೇಲ್ಭಾಗಕ್ಕೆ ಚಿಕಿತ್ಸೆ ಕೊಡಲಾಗುತ್ತದೆ. ಈ ಚಿಕಿತ್ಸೆಯನ್ನು ಐದು ನಿಮಿಷ ನೀಡಲಾಗುವುದು.

#### ಟಿಸಿಎ ಪೀಲ್ (ಟ್ರೈಕ್ಲೊರೊಯಾಕ್ಟಿಕ್ ಆಸಿಡ್ ಪೀಲ್)

ಈ ಚಿಕಿತ್ಸೆ ಮುಖ ಮೇಲಿನ ಕಪ್ಪು ಕಲೆಗಳನ್ನು ಕಡಿಮೆ ಮಾಡುತ್ತದೆ. ಕಪ್ಪು ಪ್ಯಾಚ್‌ಗಳನ್ನು ತೆಗೆಯುತ್ತದೆ. ಇಲ್ಲಿ ಸ್ವಲ್ಪಮಟ್ಟಿಗೆ ಚರ್ಮದ ಒಳಭಾಗಕ್ಕೆ ಚಿಕಿತ್ಸೆ ನೀಡಲಾಗುತ್ತದೆ. ಈ ಚಿಕಿತ್ಸೆಗೆ 3 ನಿಮಿಷ ಸಮಯ ಸಾಕು.

#### ಮ್ಯಾಂಡಲಿಕ್ ಆಸಿಡ್ ಪೀಲ್

ಮ್ಯಾಂಡಲಿಕ್ ಆಸಿಡ್ ಪೀಲ್ ಈ ಚಿಕಿತ್ಸೆಯನ್ನು ಬಂಗು (ಪಿಗ್ಮೆಂಟೇಷನ್) ನಿವಾರಣೆಗೆ ನೀಡಲಾಗುತ್ತದೆ.

#### ಸ್ಯಾಲಿ ಪೀಲ್ (ಸಾಲಿಸೈಲಿಕ್ ಆಸಿಡ್)

ಸ್ಯಾಲಿ ಪೀಲ್ಸ್ ಅನ್ನು ಎಣ್ಣೆ ಚರ್ಮ ಇರುವವರಿಗೆ ಬಳಸುತ್ತೇವೆ. ಈ ಪೀಲ್ಸ್ ಹಾಕುವುದರಿಂದ ಚರ್ಮದ ಎಣ್ಣೆಯು ಆವಿಯಾಗಿ ಚರ್ಮ ನುಣುಪಾಗುತ್ತದೆ.

### ಚಿಕಿತ್ಸೆ ನೀಡುವ ವಿಧಾನ:

ಚಿಕಿತ್ಸೆ ಪಡೆಯುವ ಮುಂಚೆ ನೀರಿನಿಂದ ಮುಖ ತೊಳೆದು ನಂತರ ಒರೆಸಿ ಚಿಕಿತ್ಸೆ ನೀಡಬೇಕು. ಸಮಯ ಐದು ನಿಮಿಷ ಬೇಕಾಗುತ್ತದೆ. ಪ್ರತಿ 15 ದಿನಕ್ಕೊಮ್ಮೆ ಚಿಕಿತ್ಸೆ ಪಡೆಯಬೇಕು. 6 ರಿಂದ 8 ಸಲ ಚಿಕಿತ್ಸೆ ಪಡೆಯಬೇಕು. ಹಾಗೂ ಇದನ್ನು ಫೇಶಿಯಲ್ ತರಹ ಪ್ರತಿ ತಿಂಗಳಿಗೊಮ್ಮೆ ಕೂಡ ಚಿಕಿತ್ಸೆ ಪಡೆಯಬಹುದು. ಇದರಿಂದ ಯಾವುದೇ ರೀತಿಯ ಹಾನಿಯಾಗುವುದಿಲ್ಲ.

### ಮೈಕ್ರೊ ಡರ್ಮಾಟೇಶನ್ ಚಿಕಿತ್ಸೆ

ಈ ಚಿಕಿತ್ಸೆಯನ್ನು ಚರ್ಮದ ಪಾಲಿಶಿಂಗ್‌ಗೆ ಬಳಸುವುದು. ಸ್ಟ್ರೆಟ್ ಮಾರ್ಕ್ ತೆಗೆಯಲು ಕೂಡ ಬಳಸಬಹುದು. ಕಪ್ಪು ಕಲೆ ಹಾಗೂ ಗುಳ್ಳೆಗಳನ್ನು ಕಡಿಮೆ ಮಾಡಲು ಉಪಯೋಗಿಸುತ್ತಾರೆ.

19 ವರ್ಷ ಮೇಲ್ಪಟ್ಟ ಎಲ್ಲಾ ವಯಸ್ಸಿನವರಿಗೂ (ಹೆಂಗಸರು–ಗಂಡಸರು) ಎಲ್ಲರೂ ಪಡೆಯಬಹುದಾದ ಚಿಕಿತ್ಸೆ ಇದು. ಡೆಡ್‌ಸ್ಕಿನ್ ತೆಗೆಯಲು ಕೂಡ ಈ ಚಿಕಿತ್ಸೆ ಬಹಳ ಉಪಕಾರಿ. ಮುಖದಲ್ಲಿ ಗುಳ್ಳೆಗಳಾಗಿ ಗುಳಿ ಬಿದ್ದಿರುವ ಚರ್ಮವನ್ನು ಸಮತಟ್ಟಾಗಿ ಮಾಡಲು ಈ ಚಿಕಿತ್ಸೆಯಿಂದ ಸುಲಭ.

ಮದುವೆಯ ಹುಡುಗಿಯರೂ ಕೂಡ ಮದುವೆಗೆ ಮುಂಚೆ ಒಂದಾರು ತಿಂಗಳಲ್ಲಿ ಈ ಚಿಕಿತ್ಸೆಯನ್ನು ಪಡೆದು ಚರ್ಮವನ್ನು ಕಾಂತಿಯುತವಾಗಿಸಿ ಕೊಳ್ಳಬಹುದು.

